# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-3045/2017/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 14/11/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಟಿ.ಎಂ.ಹಾಲೇಶ್‌ಕುಮಾರ್, ಕಾರ್ಯನಿರ್ವಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಸಾಸ್ವೆಹಳ್ಳಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ, ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀ.ಸೈಯದ್ ಮೋದಿನ್ ಸಾಬ್ ಬಿನ್ ಸೈಯದ್ ಅಹಮದ್ ಸಾಬ್, ಹನುಮನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಟಿ.ಎಂ.ಹಾಲೇಶ್‌ಕುಮಾರ್, ಕಾರ್ಯನಿರ್ವಹಣಾಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಸಾಸ್ವೆಹಳ್ಳಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಪ್ರಧಾನ ಮಂತ್ರಿ ಪಸಲ್ ಭೀಮಾ ಯೋಜನೆಯಲ್ಲಿ ರೈತರ ಖಾತೆಗೆ ನೇರವಾಗಿ ಬೆಳೆ ವಿಮೆ ಬಂದಿದ್ದು ರೈತರಿಂದ ಎದುರುದಾರರು ಖಾಲಿ ಚೆಕ್ಕಿಗೆ ಸಹಿ ಪಡೆದು ಹಣವನ್ನು ಡ್ರಾ ಮಾಡಿಕೊಂಡು ಸ್ವಲ್ಪ ಮೊತ್ತವನ್ನು ಮಾತ್ರ ರೈತರಿಗೆ ಕೊಟ್ಟು ಉಳಿದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ರೈತರಿಗೆ ಫಸಲ್ ಭೀಮಾ ಯೋಜನೆಯಡಿ ಬಂದ ಬೆಳೆ ವಿಮೆಯನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡದೆ ಮೋಸ ಮಾಡಿರುತ್ತಾರೆ. ವಿಮೆ ಹಣವನ್ನು ವಿತರಿಸಿರುವ ಬಗ್ಗೆ ದಾಖಲಾತಿಗಳನ್ನು ಕೇಳಲಾಗಿ ದಾಖಲಾತಿ ನೀಡದೆ ಹಾರಿಕೆಯ ಉತ್ತರವನ್ನು ನೀಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರಾದ

ಶ್ರೀ.ಸೈಯದ್ ಮೊಹಿನುದ್ದೀನ್ ಸಾಬ್ ಪ್ರಾಥಮಿಕ ಕೃಷಿ ಪತ್ತಿನ ಸಂಘದಲ್ಲಿ ಸದಸ್ಯರಾಗಿದ್ದು, ಕೆ.ಸಿ.ಸಿ. ಬೆಳೆ ಸಾಲ ರೂ.45,000/– ಗಳನ್ನು ಹೊಂದಿರುತ್ತಾರೆ. 2016–17 ರಲ್ಲಿ ಸದರಿಯವರಿಗೆ ಫಸಲ್ ಭೀಮಾ ಯೋಜನೆಯಡಿಯಲ್ಲಿ ರೂ.54,883/– ಬಂದಿದ್ದು ಸದರಿ ಹಣ ಡಿ.ಸಿ.ಸಿ. ಬ್ಯಾಂಕ್ ಹೊನ್ನಾಳಿ ಇವರ ಉಳಿತಾಯ ಖಾತೆ ನಂ.200000845224 ಖಾತೆಗೆ ಜಮಾ ಆಗಿರುತ್ತದೆ. ದಿ.17/8/17 ರಲ್ಲಿ ಸದರಿಯವರು ತುರ್ತಾಗಿ ಹಣ ಬೇಕಾಗಿದ್ದರಿಂದ, ಕೈಗಡವಾಗಿ ಹಣ ಕೇಳಿದರು. ಆಗ ಹಣ ಡಿ.ಸಿ.ಸಿ. ಬ್ಯಾಂಕ್‌ನ ಖಾತೆಯಲ್ಲಿದೆ ಡ್ರಾ ಮಾಡಿಕೊಳ್ಳಿ ಎಂದು ತಿಳಿಸಿದಾಗ, ದೂರುದಾರರು ಬಿಡದೆ ಅರ್ಜೆಂಟಾಗಿ ಹಣ ಬೇಕೆಂದು ಒತ್ತಾಯ ಮಾಡಿ ಹಣವನ್ನು ಸಾಲವಾಗಿ ಪಡೆದು ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಅವರ ಹಣವನ್ನು ಡ್ರಾ ಮಾಡಿಕೊಳ್ಳಿ ಎಂದು ತಿಳಿಸಿ ಚೆಕ್ ನಂ.031173 ಗೆ ಸಹಿ ಮಾಡಿ ಕೊಟ್ಟಿರುತ್ತಾರೆ. ಸದರಿಯವರ ಖಾತೆಯಿಂದ ಹಣವನ್ನು ತೆಗೆದು ದೂರುದಾರರಿಗೆ ಕೊಟ್ಟಿರುವ ಮೊತ್ತವನ್ನು ವಜಾ ಮಾಡಿ ಉಳಿದ ಮೊತ್ತವನ್ನು ದೂರುದಾರರಿಗೆ ತಲುಪಿಸಲೆಂದು ಅವರ ಬಳಿ ಇಟ್ಟುಕೊಂಡಿದ್ದರು. ದೂರುದಾರರಿಗೆ ಮೌಖಿಕವಾಗಿ ಹೇಳಿ ಕಳುಹಿಸಿದರೂ ಸಹ ಅವರು ಹಣ ಪಡೆಯಲು ಬರಲಿಲ್ಲ. ಹಾಗಾಗಿ ವಾಪಸ್ ಅವರ ಉಳಿತಾಯ ಖಾತೆಗೆ ಜಮಾ ಮಾಡಲಾಗಿದೆ. ಮತ್ತು ಉದ್ದೇಶಪೂರ್ವಕವಾಗಿ ಪ್ರಕರಣದಲ್ಲಿ ಸಿಲುಕಿಸಲು ಸಂಚು ಮಾಡಿರುತ್ತಾರೆ. ದೂರಿನಲ್ಲಿ ಹೇಳಿರುವ 4 ಜನ ಫಲಾನುಭವಿಗಳು ನೇರವಾಗಿ ಚೆಕ್‌ಗೆ ಸಹಿ ಮಾಡಿ ಹಣ ಪಡೆದಿದ್ದರೂ ಸಹ ವಿನಾಕಾರಣ ಎದುರುದಾರರ ಮೇಲೆ ತಪ್ಪು ಭಾವನೆ ಬರುವ ಹಾಗೆ ದೂರು ಸಲ್ಲಿಸಿರುತ್ತಾರೆ. ಬೆಳೆ ವಿಮೆ ಬಂದಂತಹ ಪಟ್ಟಿಯು ಅವರ ಸಂಘಕ್ಕೆ ಬರುವುದಿಲ್ಲ. ಅದು ಆನ್‌ಲೈನ್‌ನಲ್ಲಿ ಖಾತೆಗೆ ಜಮಾ ಆಗುತ್ತದೆಯೆಂದು ದೂರುದಾರರಿಗೆ ತಿಳಿಸಿದರೂ ಸಹ ದೂರನ್ನು ನೀಡಿರುತ್ತಾರೆ. ಫಲಾನುಭವಿಗಳೇ ನೇರವಾಗಿ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಚೆಕ್‌ಗೆ ಸಹಿ ಮಾಡಿ ಹಣ ಪಡೆದಿರುತ್ತಾರೆಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ಸುಳ್ಳು ಸಮಜಾಯಿಷಿಯನ್ನು ನೀಡಿರುತ್ತಾರೆ. ರೈತರಿಗೆ ಈ ಹಿಂದಿನಿಂದಲೂ ಬರುವ ಸಹಾಯ ಧನ ಹಾಗೂ ಇತರೇ ಸೌಲಭ್ಯಗಳನ್ನು ರೈತರ ಹೆಸರಿನಲ್ಲಿ ಪಡೆದು ರೈತರಿಗೆ ಸಿಗದಂತೆ ಎದುರುದಾರರು ಮೋಸ ಮಾಡುತ್ತಿರುತ್ತಾರೆ. ನೇರವಾಗಿ ರೈತರ ಅಹವಾಲುಗಳನ್ನು ಕೇಳಿ ಎದುರುದಾರರ ಮೇಲೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿರುತ್ತಾರೆ. ಆದ್ದರಿಂದ, ದೂರುದಾರರ ದೂರಿನ ಬಗ್ಗೆ ವಿಚಾರಣೆ ನಡೆಸಿ ದಾಖಲಾತಿಗಳ ಸಮೇತ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು.

5) ಪೊಲೀಸ್ ಅಧೀಕ್ಷಕರು (ಪ್ರಭಾರ), ಕರ್ನಾಟಕ ಲೋಕಾಯುಕ್ತ, ದಾವಣಗೆರೆ, ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

"ಶ್ರೀ.ಹಾಲೇಶ್ @ ಟಿ.ಎಂ.ಹೆಚ್.ಕುಮಾರ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕೃಷಿ ಪತ್ತಿನ ಸಹಕಾರಿ ಸಂಘ ಇವರು 2016-17ನೇ ಸಾಲಿನಲ್ಲಿ ಈ ಕೆಳಕಂಡ 5 ರೈತರ ಖಾತೆಯಿಂದ ಒಟ್ಟು ರೂ.2,81,653/- ಹಿಂಪಡೆದು ರೂ.1,75,690/- ನಗದಾಗಿ ವಿತರಿಸಿ ರೂ.68,362/- ಗಳನ್ನು ಮರು ರೈತರ ಖಾತೆಗೆ ಜಮೆ ಮಾಡಿ ರೂ.38,952/- ಗಳನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ಅಧಿಕಾರ ದುರುಪಯೋಗ ಮಾಡಿರುವುದು ವಿಚಾರಣೆ ಕಾಲದಲ್ಲಿ ಪಡೆದುಕೊಂಡ ಹೇಳಿಕೆ ಹಾಗೂ ದಾಖಲಾತಿಗಳಿಂದ ಕಂಡುಬಂದಿರುತ್ತದೆ.

| ಕ್ರ. ಸಂ. | ರೈತ ಫಲಾನುಭವಿ ಹೆಸರು | ಮಂಜೂರಾದ ವಿಮೆಯ ಮೊತ್ತ (ರೂ) | ವಿತರಿಸಿದ ವಿಮೆಯ ಮೊತ್ತ (ರೂ) | ಖಾತೆಗೆ ಜಮಾ ಮಾಡಿರುವ ಮೊತ್ತ | ದುರುಪಯೋಗ ಪಡಿಸಿಕೊಂಡಿರುವ ಮೊತ್ತ (ರೂ) | ಷರಾ |
|---|---|---|---|---|---|---|
| 1 | ಶ್ರೀ.ಸೈಯದ್ ಮೊಹಿನುದೀನ್ | 54,883-00 | 26,490/- | 29,744/- | - | - |
| 2 | ಶ್ರೀ.ಸೈಯದ್ ಉಮರ್ ಸಾಬ್ | 89,643-00 | 74,000/- | -- | 15,643/- | -- |
| 3 | ಶ್ರೀ.ಪಾಲಕ್ಷಪ್ಪ | 48,875-00 | 2,200/- | 38,618/- | 8,057/- | -- |
| 4 | ಶ್ರೀ.ನಾಗರಾಜ ಟಿ.ಆರ್ | 57,186-00 | 47,000/- | | 10,186/- | - |
| 5 | ಶ್ರೀ.ಸೈಯದ್ ಅಬ್ದುಲ್ ರಜಾಕ್ ಸಾಬ್ | 31,066-00 | 26,000/- | | 5,066/- | - |
| | ಒಟ್ಟು | 2,81,653-00 | 1,75,690/- | 68,362/- | 38,952/- | |

6) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ದಿ.31/8/17 ರಂದು ಎದುರುದಾರರು ರೈತ ಫಲಾನುಭವಿಗಳಿಂದ ಚೆಕ್‌ಗಳಿಗೆ ಸಹಿ ಪಡೆದುಕೊಂಡು, ಎದುರುದಾರರು ಚೆಕ್ ಹಿಂಬದಿಯಲ್ಲಿ ಸಹಿ ಮಾಡಿ ಟಿ.ಆರ್.ನಾಗರಾಜ್ ಇವರ ಖಾತೆಯಿಂದ ರೂ.57,100/- ಸೈಯದ್ ರಜಾಕ್ ಸಾಬ್ ಇವರ ಖಾತೆಯಿಂದ ರೂ.31,000/- ಗಳನ್ನು ಹೊನ್ನಾಳಿ ಸಹಕಾರ ಬ್ಯಾಂಕ್‌ನಲ್ಲಿ ನಗದು ಹಿಂಪಡೆದಿರುವುದು ಕಂಡುಬರುತ್ತದೆ. ಮತ್ತು ದಿ.5/9/17 ರಂದು ಸಿ.ಇ.ಓ.ಹಾಲೇಶ್ ರವರು ಹೊನ್ನಾಳಿ ಸಹಕಾರಿ ಬ್ಯಾಂಕ್‌ನಲ್ಲಿ ಶ್ರೀ.ಸೈಯದ್ ಮೊಹಿನಿದ್ದೀನ್‌ರವರ ಖಾತೆಯಿಂದ ರೂ.57,200/-, ಸೈಯದ್ ಉಮರ್‌ಸಾಬ್‌ರವರ ಖಾತೆಯಿಂದ ರೂ.89,600/- ಹಾಗೂ ಪಾಲಾಕ್ಷ ರವರ ಖಾತೆಯಿಂದ ರೂ.48,875/- ಗಳನ್ನು ಸಹಿ ಮಾಡಿ ನೀಡಲಾದ ಚೆಕ್‌ಗಳ ಹಿಂಬದಿಯಲ್ಲಿ ಎದುರುದಾರರು ಸಹಿ ಮಾಡಿ ನಗದನ್ನು ಪಡೆದಿರುವುದು ವರದಿಯಲ್ಲಿ ಕಂಡುಬರುತ್ತದೆ. ಎದುರುದಾರರು 5 ರೈತರ

ಖಾತೆಯಿಂದ ಒಟ್ಟು ರೂ.2,81,653/- ಹಣವನ್ನು ಹಿಂಪಡೆದು ರೂ.1,75,690/- ನ್ನು ನಗದಾಗಿ ವಿತರಿಸಿ ರೂ.68,362/- ನ್ನು ಮರು ರೈತರ ಖಾತೆಗೆ ಜಮಾ ಮಾಡಿ ರೂ.38,952/- ನ್ನು ಸ್ವಂತಕ್ಕೆ ಬಳಸಿಕೊಂಡಿರುವ ಅಂಶ ಕಂಡುಬರುತ್ತದೆ. ಈ ಬಗ್ಗೆ ತನಿಖಾಧಿಕಾರಿ ತನ್ನ ವರದಿಯ ಜೊತೆ ಸೈಯದ್ ಮೊಹಿನಿದ್ದೀನ್, ಸೈಯದ್ ಉಮರ್, ಪಾಲಾಕ್ಷಪ್ಪ, ನಾಗರಾಜ, ಸೈಯದ್ ಅಬ್ದುಲ್ ರಜಾಕ್ ಇವರ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ಆಫ್ ಅಕೌಂಟ್ ಪ್ರತಿ ಹಾಗೂ ಚೆಕ್‌ನ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ. ದೂರುದಾರರು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ಇದರ ಚೆಕ್ ಸಂ.31173 ಇದನ್ನು ಹಾಜರು ಪಡಿಸಿದ್ದು, ಅದು ಸೆಲ್ಫ್ ಚೆಕ್ ಆಗಿರುವುದು ಕಂಡುಬರುತ್ತಿದ್ದು, ಚೆಕ್‌ನ ಹಿಂಬದಿಯಲ್ಲಿ ಎದುರುದಾರರ ಸಹಿ ಕೂಡ ಕಂಡುಬರುತ್ತದೆ.

7) ಮೇಲಿನ ಅಂಶಗಳನ್ನು ಗಮನಿಸಿದಾಗ, ರೈತ ಫಲಾನುಭವಿಗಳಿಗೆ ನೀಡಬೇಕಾಗಿದ್ದ ಹಣವನ್ನು ಎದುರುದಾರರು ನಗದೀಕರಿಸಿಕೊಂಡು ಹಣ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ತನಿಖಾಧಿಕಾರಿಯ ವರದಿಯ ಪ್ರಕಾರ ಎದುರುದಾರರು ಒಟ್ಟು ರೂ.2,81,653/- ಮೊತ್ತವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡು ನಂತರದಲ್ಲಿ ರೂ.1,75,690/-ನ್ನು ನಗದಾಗಿ ಹಾಗೂ ರೂ.68,362/- ನ್ನು ಖಾತೆಗೆ ಜಮಾ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿದ್ದು, ಆದರೆ ರೂ.1,75,690/- ನ್ನು ಎದುರುದಾರರು ರೈತರಿಗೆ ನಗದಾಗಿ ನೀಡಿರುವ ಬಗ್ಗೆ ಯಾವುದೇ ದಾಖಲಾತಿಗಳು ಕಂಡುಬರುತ್ತಿಲ್ಲ. ಆದ್ದರಿಂದ, ಎದುರುದಾರರಿಂದ ನಗದಾಗಿ ನೀಡಲಾಗಿದೆ ಎನ್ನಲಾದ ರೂ.1,75,690/- ಹಾಗೂ ದುರುಪಯೋಗ ಪಡಿಸಿಕೊಂಡಿರುವ ರೂ.38,952/- ಒಟ್ಟು ರೂ.2,14,642/- ನ್ನು ವಸೂಲು ಮಾಡಲು ಸಕ್ಷಮ ಪ್ರಾಧಿಕಾರದವರು ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ ಮತ್ತು ಎದುರುದಾರರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ಕೂಡ ಹೂಡಬೇಕಾಗುತ್ತದೆ.

8) ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಅಧಿಕಾರ ದುರುಪಯೋಗ ಹಾಗೂ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಅವರಿ ಸಲ್ಲಿಸಿರುವ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಹಾಗೂ ಸಮಂಜಸವಾಗಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಆ ಕಾರಣದಿಂದಾಗಿ ಎದುರುದಾರರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

9) ಎದುರುದಾರರಾದ ಶ್ರೀ.ಟಿ.ಎಂ.ಹಾಲೇಶ್‌ಕುಮಾರ್ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ

ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ಅಡಿಯಲ್ಲಿ, ಎದುರುದಾರರಾದ ಶ್ರೀ.ಟಿ.ಎಂ.ಹಾಲೇಶ್‌ಕುಮಾರ್ ಇವರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10) ಮುಂದುವರೆದು, **ಎದುರುದಾರರು ಫೆಬ್ರವರಿ 2019 ರಲ್ಲಿ ನಿವೃತ್ತಿ ಹೊಂದುತ್ತಿರುವುದರಿಂದ,** ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಎರಡು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 14/11

(ನ್ಯಾಯಮೂರ್ತಿ ಎನ್.ಆನಂದ್)
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

14/11